ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ ಮತ್ತು ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ೧) ಚಲನಚಿತ್ರಗಳಿಗೆ ಸಹಾಯಧನ ನೀಡುವ ಯೋಜನೆ.

೨) ಪ್ರಾದೇಶಿಕ ಭಾಷೆಯ ಚಲನಚಿತ್ರಗಳಿಗೆ ಪ್ರಶಸ್ತಿ ನೀಡುವ ಯೋಜನೆ.

೩) ಪುಟ್ಟಣ್ಣ ಕಣಗಾಲ್ ಪ್ರಶಸ್ತಿ.

೪) ರಾಜ್ಯ ಚಲನಚಿತ್ರ ಭಂಡಾರ.

೫) ಕನ್ನಡ ಚಿತ್ರಗಳ ನಿರ್ಮಾಪಕರುಗಳಿಗೆ ಕಡಿಮೆ ದರದಲ್ಲಿ ಚಿತ್ರೀಕರಣ ಅನುಮತಿ ನೀಡಿಕೆ.

೬) ಚಲನಚಿತ್ರಗಳಿಗೆ ತೆರಿಗೆ ವಿನಾಯಿತಿ.

ಇ) ಹೌದು.

ರಾಜ್ಯ ಸರ್ಕಾರದ ಅಧೀನದಲ್ಲಿರುವ ಶ್ರೀ ಕಂಠೀರವ ಸ್ಟೂಡಿಯೊದಲ್ಲಿ ಚಲನಚಿತ್ರ ನಿರ್ಮಾಪಕರುಗಳಿಗಾಗಿ ಚಿತ್ರೀಕರಣಕ್ಕೆ ಅನುಕೂಲವಾಗುವಂತೆ ೨ (ಎರಡು) ಚಿತ್ರೀಕರಣ ಮಳಿಗೆಗಳು ಹಾಗೂ ಕೆಲವು ಪಾಯಂ ಸೆಟ್ಟುಗಳು ಒದಗಿಸಲಾಗಿದೆ. ಇತ್ತೀಚೆಗೆ ಎಂ. ಎಂ. ಸ ಎರಿಪ್ಲೆಕ್ಸ್ ಕ್ಯಾಮರಾ ಮತ್ತು ಇದಕ್ಕೆ ಸಂಬಂಧಪಟ್ಟ ಸಹಾಯಕಾರಿ ವಸ್ತುಗಳು ಸಹ ಇರುತ್ತವೆ. ಇವುಗಳನ್ನು ನಿರ್ಮಾಪಕರುಗಳಿಗೆ ಹೊರಾಂಗಣ ಚಿತ್ರೀಕರಣಕ್ಕಾಗಿ ಬಾಡಿಗೆಯ ಆಧಾರದ ಮೇರೆಗೆ ನೀಡಲಾಗುತ್ತಿದೆ. ಸುಮಾರು ೪ ಎಕರೆಯಷ್ಟು ಉದ್ಯಾನವನವು ಇರುತ್ತದೆ. ಇದು ಸಹ ಚಿತ್ರೀಕರಣ ಸಲುವಾಗಿ ನಿರ್ಮಾಪಕರಿಗೆ ನೀಡಲಾಗುತ್ತಿದೆ.

ರಾಜ್ಯದ ಕೆಲವು ಮಂತ್ರಿಯವರು ಚಲನ ಚಿತ್ರಗಳಲ್ಲಿ ಅಭಿನಯಿಸುವ ಬಗ್ಗೆ

೭೯ (೧೩೦) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಪ್ರವಾಸ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ರಾಜ್ಯದ ಕೆಲವು ಸಚಿವರು ಚಲನಚಿತ್ರಗಳಲ್ಲಿ ಅಭಿನಯಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ, ಇವರ ಅಭಿನಯದಿಂದ ಸರ್ಕಾರದ ದೈನಂದಿನ ಆಡಳಿತಕ್ಕೆ ಏನಾದರೂ ತೊಂದರೆಯಾಗಿದೆಯೇ ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ಏನಾದರೂ ಆದೇಶ ಕೊಟ್ಟಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.